# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್ ಅವರು ವಿಶ್ವ ಪರಿಸರ ದಿನದ ಪ್ರಯುಕ್ತ ರಾಜಸ್ಥಾನದ ಹಿಂದೋನ್‌ನ ಶಿಶು ವಾಟಿಕಾ ಪರಿಸರದಲ್ಲಿ ವಿದ್ಯಾಲಯದ ಆಡಳಿತ ಮಂಡಳಿಯವರ ಜೊತೆಗೂಡಿ ಗಿಡವನ್ನು ನೆಟ್ಟರು.


ಸಂಪುಟ : 46 | ಸಂಚಿಕೆ : 06 | ಶೋಭಕೃತ್ – ಆಷಾಢ – ಅಧಿಕ ಶ್ರಾವಣ | ಕಲಿಯುಗಾಬ್ದ 5125 | 01-07-2023 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4


# ಲೋಕಕ್ಕೆ ಬೆಳಕು ನೀಡಬಲ್ಲ ವಿಶ್ವಗುರು ಭಾರತ

–ಡಾ. ರೋಹಿಣಾಕ್ಷ ಶಿರ್ಲಾಲು

ಗುರು ಕಾಲಾತೀತ. ಅರಿವಿನ ಲೋಕದ ದಾರಿ ತೋರಿಸುವ ಗುರು ಎಲ್ಲರಿಗೂ ಬೇಕು. ಎಲ್ಲಾ ಕಾಲಕ್ಕೂ ಬೇಕು. ವ್ಯಕ್ತಿಗೋ, ಕುಟುಂಬಕ್ಕೋ, ಊರಿಗೋ ಒಬ್ಬರು ಗುರುವಿರಬಹುದು. ಅವರು ತಮ್ಮ ವ್ಯಾಪ್ತಿಯಲ್ಲಿ ಜ್ಞಾನದ ಪ್ರಸರಣದ ಕೆಲಸವನ್ನು ಮಾಡುತ್ತಿರಬಹುದು. ವ್ಯಕ್ತಿಯೊಬ್ಬರು ಗುರುವಾಗಬಹುದು, ಕೆಲವೊಮ್ಮೆ ತತ್ವವೋ, ಸಂಕೇತವೋ ಗುರುವಾಗಲೂ ಬಹುದು. ಇದರ ಜೊತೆಗೆ ಒಂದು ದೇಶವೇ ಜಗದ ಗುರುವಾಗುವುದಾದರೆ? ಹಾಗಾಗಲು ಸಾಧ್ಯವೇ ಎನ್ನುವ ಪ್ರಶ್ನೆ ಕೆಲವರ ಮನಸ್ಸಿನಲ್ಲಿ ಮೂಡಬಹುದು. ಹೌದು, ಒಂದೊಮ್ಮೆ ವಿಶ್ವವೇ ಭಾರತವನ್ನು ಗುರುವೆಂದು ಸ್ವೀಕರಿಸಿತ್ತು. ಈ "ಗುರುತ್ವ" ಭೌತಿಕ ಸ್ವರೂಪದ್ದೇ ಆಗಿರಬೇಕೆಂದೇನಿಲ್ಲ. ಇಲ್ಲಿನ ಸಂಸ್ಕೃತಿ, ಆಧ್ಯಾತ್ಮ, ವಿಜ್ಞಾನ ಮೊದಲಾದ ಸಂಗತಿಗಳು ವಿಶ್ವದ ನಾನಾ ಭಾಗದ ದೇಶಗಳ, ಅಲ್ಲಿನ ಜನರ ಜೀವನದ ಮೇಲೆ ಗಾಢವಾದ ಪ್ರಭಾವವನ್ನು ಬೀರಿತ್ತು. ಭಾರತವು ವಿಶ್ವಗುರುವಾಗಿತ್ತೇ? ಭಾರತವು ಜಗತ್ತಿಗೆ ಮಾರ್ಗದರ್ಶನ ಮಾಡಿತ್ತೇ? ಹಾಗಾದರೆ ಅಂತಹ ಭಾರತ ಪರಕೀಯರ ಗುಲಾಮಿತಕ್ಕೆ ಏಕೆ ಸಿಲುಕಿತು? ಹೀಗೆ ಗುಲಾಮಿತನಕ್ಕೆ ಸಿಲುಕಿದ್ದರಿಂದ ಭಾರತ ಕಳೆದುಕೊಂಡಿದ್ದೇನು? ಈ ಕುರಿತು ಅನೇಕ ದಾರ್ಶನಿಕರು ಭಾರತೀಯರಿಗೆ ಈಗಾಗಲೇ ಮನವರಿಕೆ ಮಾಡಲು ಪ್ರಯತ್ನಿಸಿದ್ದಾರೆ. ಹೀಗಿದ್ದರೂ ನಾವು ಭಾರತವನ್ನು ಸರಿಯಾಗಿ ಅರಿಯಲಿಲ್ಲ.

ಬ್ರಿಟಿಷರು ತಮ್ಮ ಸಾಮ್ರಾಜ್ಯಶಾಹಿ ಪ್ರಭುತ್ವವನ್ನು ಕಟ್ಟಿಕೊಂಡಾಗ ಈ ದೇಶವನ್ನು, ಇಲ್ಲಿನ ಸಂಸ್ಕೃತಿ ಪರಂಪರೆಗಳ ಬಗೆಗೆ ಕಟ್ಟಿದ ಚಿತ್ರಣ, ನಿರೂಪಣೆಗಳು ಜನರ ನೈತಿಕ ಸ್ಥೈರ್ಯವನ್ನು ಕುಸಿಯುವಂತೆ ಮಾಡುವಲ್ಲಿ, ಈ ದೇಶದಲ್ಲಾದ ತಮ್ಮ ಆಕಸ್ಮಿಕ ಹುಟ್ಟಿಗಾಗಿ ಕೀಳರಿಮೆಯನ್ನು ಹೊಂದುವಂತೆ ಮಾಡುವಲ್ಲಿಯೂ ಯಶಸ್ವಿಯಾಗಿದೆ. ಯಾವ ದೇಶ ಸಾವಿರಾರು ವರ್ಷಗಳಿಂದ ವ್ಯವಸ್ಥಿತವಾದ ಕ್ರಮದಿಂದ ತನ್ನನ್ನು ತಾನು ವಿಕಸಿಸಿಕೊಂಡು ಬಂದಿತ್ತೋ, ಯಾವ ದೇಶ ಜಗತ್ತಿಗೆಲ್ಲಾ ಮಾನವತೆಯ ಬೆಳಕನ್ನು, ಜ್ಞಾನದ ಗಣಿಯನ್ನು ನೀಡಿತ್ತೋ ಅಂತಹ ಭಾರತವನ್ನು ಬ್ರಿಟಿಷ್ ಆಳ್ವಿಕೆಯ ಕಾಲದಲ್ಲಿ ಕಗ್ಗತ್ತಲೆಯ ಖಂಡ ಎಂದು ಹೇಳುವ ಮೂಲಕ ಇಲ್ಲಿನ ಸಾಧನೆಯನ್ನು ಶೂನ್ಯವಾಗಿ ಬಿಂಬಿಸಲು ಪ್ರಯತ್ನಿಸಲಾಗಿತ್ತು. ಮೊದಲ ಹಂತದಲ್ಲಿ ಭಾರತದ ಬೌದ್ಧಿಕ, ಸಾಂಸ್ಕೃತಿಕ ಉನ್ನತಿಗೆ ಕಾರಣವಾದ ವ್ಯವಸ್ಥೆಗಳನ್ನು ಬೇರು ಸಹಿತ ನಾಶಮಾಡುವ ಸಂಚನ್ನು ರೂಪಿಸಲಾಯಿತು. ಕಗ್ಗತ್ತಲೆಯ ಖಂಡವೆನ್ನುವುದು ಮನಸ್ಸಿನಾಳದಲ್ಲಿ ಚಿತ್ರಿತವಾದ ಪರಿಣಾಮ ವಿಜ್ಞಾನ, ತಂತ್ರಜ್ಞಾನ, ಕಲೆ, ಸಾಹಿತ್ಯ ಇವೇ ಮೊದಲಾದ ಕ್ಷೇತ್ರಗಳಲ್ಲಿ ನಮ್ಮ ಸಾಧನೆಯನ್ನು ಕುರಿತಾಗಿ ವಿಶೇಷವಾಗಿ ಚಿಂತನೆ ಮಾಡದ ತಲೆಮಾರು ತಲೆಮಾರುಗಳೇ ಕಳೆದುಹೋಗಿದೆ.

ಭಾರತವು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ಕಾರಣದಿಂದಲೇ ನಾವು ನಾಗರಿಕರಾದೆವು, ನಮ್ಮಲ್ಲಿ ಆಧುನಿಕತೆಯ ಪ್ರವೇಶವಾಯಿತು, ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯಾಯಿತು ಎನ್ನುವ ತಿಳುವಳಿಕೆಯೂ ಬ್ರಿಟಿಷರೇ ಹುಟ್ಟುಹಾಕಿದ ಗುಲಾಮಿ ಮಾನಸಿಕತೆಯ ಪ್ರತಿಬಿಂಬವಾಗಿದೆ. ಹಾಗಾದರೆ ಭಾರತ ಯಾವುದು? ಪರಕೀಯರ ಕೈಯಲ್ಲಿ ಸಿಲುಕಿಕೊಂಡಿದ್ದ ಭಾರತ ತನ್ನ ಸತ್ವವನ್ನೆಲ್ಲಾ ಕಳೆದುಕೊಂಡು ದುರ್ಬಲವಾಗಿದೆ ಎನ್ನುವ ಭಾವನೆ ಸಾರ್ವತ್ರಿಕವಾಗಿದ್ದಾಗ ಮಹರ್ಷಿ ಅರವಿಂದರು ಭಾರತವನ್ನು ಕಂಡದ್ದು ಹೀಗೆ. "ನಮ್ಮ ಆರ್ಷೇಯ ಭಾರತ ಸತ್ತುಹೋಗಿಲ್ಲ. ಇಲ್ಲವೇ ಲೋಕಕ್ಕೆ ತಾನು ನೀಡಬೇಕಾದ ಸಂದೇಶದ ಭರತವಾಕ್ಯವನ್ನೇನೂ ಅದು ನುಡಿದು ಮುಗಿಸಿಲ್ಲ. ಭಾರತ ಇನ್ನೂ ಜೀವಂತವಾಗಿದೆ. ಅದು ತನ್ನುದ್ಧಾರಕ್ಕಾಗಿಯೂ ಲೋಕದ ಮಾನವಕುಲೋದ್ಧಾರಕ್ಕಾಗಿಯೂ ಇನ್ನೂ ಮಾಡಬೇಕಾದ ಕೆಲಸ ಇದೆ" ಎಂದಿದ್ದರು. ಅರವಿಂದರು ಭಾರತದ ನಿಜಶಕ್ತಿಯನ್ನು ಈ ದೇಶದ ಜನರಿಗೆ ಪರಿಚಯಿಸಿಕೊಟ್ಟವರು. ಶತಮಾನಗಳ ಕಾಲ ಸೋಲುಗಳನ್ನು ಅನುಭವಿಸಿದರೂ ಈ ಜನಾಂಗದೊಳಗೊಂದು ಅಪಾರವಾದ ಶಕ್ತಿಯಿದೆ. ಇಡೀ ಭೂಲೋಕಕ್ಕೆ ಅನ್ವಯಿಸುವ ಭವಿಷ್ಯತ್ ಧರ್ಮವು ಭಾರತದಿಂದ ಮಾತ್ರ ಹೊರಹೊಮ್ಮಿ



ವಿಶ್ವಕ್ಕೆ ಪಸರಿಸುವುದೆನ್ನುವ ವಿಶ್ವಾಸ ಅವರ ಮಾತುಗಳಲ್ಲಿ ಪ್ರಕಟವಾಗಿತ್ತು. ಈ ಭೂಖಂಡದೊಳಗೊಂದು ಅಪೂರ್ವ ಬೆಳಕಿದೆ. ಆ ಬೆಳಕನ್ನು ಭಾರತ ತನ್ನಲ್ಲಿಯೇ ಬಚ್ಚಿಟ್ಟುಕೊಳ್ಳಲಾರದು. ಇಡೀ ಭೂಖಂಡಕ್ಕೆ ಹಬ್ಬಿಸುವುದೆನ್ನುವ ವಿಶ್ವಾಸವೂ ಅಲ್ಲಿತ್ತು. ಈ ಯೋಗ ವಿದ್ಯೆಯ ಜ್ಞಾನದ ಬೆಳಕಿನಲ್ಲಿಯೇ ಮಾನವಕುಲದ ವಿಕಾಸವಿದೆ. ಲೋಕಕ್ಕೆ ಬೇಕಾದ ಬೆಳಕನ್ನು ನೀಡುವುದು ಭಾರತದ ಕರ್ತವ್ಯವಾಗಿದೆ ಎಂದಿದ್ದರು. ಅರವಿಂದರ ಮಾತುಗಳಿಂದು ಮತ್ತೆ ಮತ್ತೆ ಸ್ಪಷ್ಟವಾಗುತ್ತಿದೆ. ಜಗತ್ತು ಇಂದು ಭಾರತದ ಕುರಿತು ಅಂತಹದ್ದೊಂದು ನಿರೀಕ್ಷೆಯನ್ನು ಹೊಂದಿದೆ. ತತ್ಕಾಲೀನ ಆಪತ್ತು ಮಾತ್ರವಲ್ಲ, ವಿಶ್ವವು ಎದುರಿಸುತ್ತಿರುವ ಅನೇಕ ಶಾಶ್ವತ ಸಮಸ್ಯೆಗಳಿಗೆ ಪರಿಹಾರವನ್ನು ಭಾರತ ಮಾತ್ರ ಕೊಡಬಲ್ಲದೆನ್ನುವ ನಿರೀಕ್ಷೆಯಿಟ್ಟುಕೊಂಡಿದೆ. ತಾತ್ವಿಕವಾಗಿ ಪಶ್ಚಿಮ ದೇಶಗಳು ಅವಸಾನದ ಕಡೆಗೆ ಸಾಗುತ್ತಿದೆ. "ಯಾವಾಗ ಶಕ್ತಿಗುಂದಿ, ಚೈತನ್ಯ ಕ್ಷೀಣವಾಗಿ ಲೋಕ ಮುಪ್ಪಾಗಿ ಮುದುಡಿ ಹೋಗುವುದೋ, ಯಾವಾಗ ವಿಪರೀತ ಪ್ರಾಪಂಚಿಕತೆ ತುಂಬಿಹೋಗಿ ತಾನು ಬಗೆಹರಿಸಲಾರದ ಸಮಸ್ಯೆಗಳಿಂದ ಬೇಸತ್ತು ಹೋಗುವುದೋ ಆಗ, ಮಾನವಕುಲಕ್ಕೆ ಯೌವನವನ್ನು, ಪೌರುಷವನ್ನು, ಅಮೃತತ್ವದ ಭರವಸೆಯನ್ನು ಕೊಡುವುದೇ ಭಾರತ ದೇಶದ ಕರ್ತವ್ಯ. ಇದಕ್ಕಾಗಿಯೇ ಭರತಖಂಡ ಭೂಲೋಕಕ್ಕೆ ಬೇಕು" (ಭಾರತದ ಮರುಹುಟ್ಟು) ಎನ್ನುವ ಶ್ರೀ ಅರವಿಂದರ ಮಾತಿನಲ್ಲಿ ವ್ಯಕ್ತವಾದುದು ಅಪೂರ್ವ ವಿಶ್ವಾಸ. ಭಾರತವು ಪುನಃ ತಲೆ ಎತ್ತಿ ನಿಲ್ಲವುದರಿಂದ ಲೋಕದ ಮೇಲೆ ಅಗಾಧವಾದ ಪರಿಣಾಮ ಉಂಟಾಗುತ್ತದೆ ಎನ್ನುವ ಮಾತು ಕೇವಲ ಆಶಾವಾದವಲ್ಲ.

ವಿಲ್ ಡುರಾಂಡ್‌ನ 1930ರಲ್ಲಿ ಬರೆದ "ಆಂಗ್ಲರ ಭಾರತ ವಿಜಯ ಅತ್ಯುನ್ನತ ನಾಗರಿಕತೆಯೊಂದರ ಮೇಲೆ ವ್ಯಾಪಾರಿ ಕಂಪನಿಯೊಂದು(ಈಸ್ಟ್ ಇಂಡಿಯಾ ಕಂಪನಿ) ನಡೆಸಿದ ವಿನಾಶಕ ದಾಳಿ. ಅದಕ್ಕೆ ಯಾವ ನೀತಿಯಾಗಲೀ ತತ್ವವಾಗಲೀ ಇಲ್ಲ. ಕಲೆಗೆ ಕುರುಡಾದ ದುರಾಸೆಯಿಂದ ಕೂಡಿದ ಈ ಕಂಪನಿಯು, ಬೆಂಕಿ ಮತ್ತು ಖಡ್ಗದ ಬಲದಿಂದ ಒಂದು ದೇಶವನ್ನು ಅಲ್ಲೋಲ ಕಲ್ಲೋಲ ಮಾಡಿ ಅಸಹಾಯಕಗೊಳಿಸಿತು" ಎನ್ನುವ ಮಾತು ಭಾರತದ ಭೌತಿಕ ಸಂಪತ್ತು ಮತ್ತು ಬೌದ್ಧಿಕ ಜ್ಞಾನದ ಪತನದ ಕಾರಣವನ್ನು ಸ್ಪಷ್ಟವಾಗಿ ಗುರುತಿಸಿದೆ. ಬ್ರಿಟಿಷ್ ಸಾಮ್ರಾಜ್ಯ ಭಾರತವನ್ನು ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸುಲಿಗೆ ಮಾಡಿ, ಒಡೆದು ಆಳುವ ನೀತಿಯ ಭಾಗವಾಗಿ ಜಾತಿಗಳ ಮೂಲಕ, ಹಿಂದೂ ಮುಸ್ಲಿಂ ವಿಭಜನೆಯ ಮೂಲಕ ಒಡೆಯುತ್ತಾ ಸಾಮ್ರಾಜ್ಯಕ್ಕೆ ಸಂಕಷ್ಟ ಬಂದಾಗಲೆಲ್ಲಾ ಕಗ್ಗೊಲೆಗಳನ್ನು ನಡೆಸುತ್ತಾ, ಭಾರತವನ್ನು ಹೇಗೆ ವಿರೂಪಗೊಳಿಸಿತು. ವಾಸ್ತವದಲ್ಲಿ ಭಾರತವು ಯುರೋಪ್ ಅಥವಾ ಏಷ್ಯಾ ಖಂಡದ ಯಾವುದೇ ದೇಶಕ್ಕಿಂತ ಬಹುದೊಡ್ಡ ಕೈಗಾರಿಕೆ ಮತ್ತು ಕಾರ್ಖಾನೆಗಳನ್ನು ಹೊಂದಿದ ದೇಶವಾಗಿ, ಹತ್ತಿ, ಉಣ್ಣೆ, ರೇಷ್ಮೆ ಬಟ್ಟೆಗಳ ತಯಾರಿಯಲ್ಲಿ ನಾಗರಿಕ ಪ್ರಪಂಚದಲ್ಲಿಯೇ ಜಗದ್ವಿಖ್ಯಾತವಾಗಿತ್ತು. 18ನೇ ಶತಮಾನದ ಆದಿಯಲ್ಲಿ ಜಗತ್ತಿನ ಆರ್ಥಿಕ ಉತ್ಪನ್ನದಲ್ಲಿ ಭಾರತದ ಪಾಲು 27% . ಅಂದರೆ ಇದು ಇಡೀ ಯುರೋಪಿನ ಉತ್ಪನ್ನಕ್ಕೆ ಸಮವಾಗಿತ್ತು! ಆಂಗ್ಲರು ಭಾರತವನ್ನು ಬಿಟ್ಟುಹೋಗುವಾಗ ಇದು ಕೇವಲ 3% ಕ್ಕೆ ಕುಸಿದಿತ್ತು ಎಂದರೆ ಬ್ರಿಟನ್ ಭಾರತವನ್ನು ಹೇಗೆ ಲೂಟಿ ಮಾಡಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಬ್ರಿಟನ್ನಿನ 200 ವರ್ಷಗಳ ಉಚ್ಛ್ರಾಯ ಸ್ಥಿತಿ ಸಾಧ್ಯವಾದುದು ಭಾರತವನ್ನು ಕೊಳ್ಳೆ ಹೊಡೆದ ಕಾರಣದಿಂದಲೇ ಎನ್ನುವುದರಲ್ಲಿ ಸಂಶಯವಿಲ್ಲ. ಇಂಗ್ಲೆಂಡ್‌ನಲ್ಲಿ ನಡೆದ ಕೈಗಾರಿಕ ಕ್ರಾಂತಿ ಎನ್ನುವುದು ಅರಳಿದ್ದು ಭಾರತದ ಕೈಗಾರಿಕೆಗಳ ಸಮಾಧಿಯ ಮೇಲೆ ಎನ್ನುವುದಕ್ಕೆ ಭಾರತದಲ್ಲಿನ ಬಟ್ಟೆ ತಯಾರಿಕೆ ಮತ್ತು ರಫ್ತುಗಳನ್ನು ಹೇಗೆ ವ್ಯವಸ್ಥಿತವಾಗಿ ನಾಶಮಾಡಿ ಇಂಗ್ಲೆಂಡ್‌ನಲ್ಲಿ ತಯಾರಾದ ಬಟ್ಟೆಗಳನ್ನು ತಂದು, ಬಂಗಾಳದ ಕೈಮಗ್ಗದ ಕುಶಲ ಕರ್ಮಿಗಳನ್ನು ತೆರಿಗೆಯ ಭಾರದಿಂದಲೇ ಸಂಪೂರ್ಣವಾಗಿ ನಾಶ ಮಾಡಿದುದನ್ನು ನಿಖರವಾದ ಅಂಕಿಅಂಶಗಳ ಮೂಲಕ ಈ ಹಿಂದೊಮ್ಮೆ ಶಶಿ ತರೂರ್ ಕೂಡ ದಾಖಲಿಸಿದ್ದರು. 19ನೇ ಶತಮಾನದ ಕೊನೆಗೆ ಭಾರತವು ಬ್ರಿಟನ್ನಿನ ಅತಿದೊಡ್ಡ ಆದಾಯದ ಮೂಲವಾಗಿತ್ತು! ಆ್ಯಂಗಸ್ ಮ್ಯಾಡಿಸನ್ ಹೇಳುವಂತೆ, "ಒಂದು ವೇಳೆ ಈ ಸಂಪತ್ತು ಭಾರತದಿಂದ ಸೂರೆಯಾಗಿರದೇ ಇದ್ದಿದ್ದರೆ ಭಾರತೀಯರ ಆದಾಯದ ಮಟ್ಟ ಗಣನೀಯವಾಗಿ ಏರುತ್ತಿತ್ತು". ಇಷ್ಟೆಲ್ಲಾ ನಷ್ಟಗಳ ಹೊರತಾಗಿಯೂ ಭಾರತ ತಾನಿಂದು ಜಗತ್ತಿನಲ್ಲೇ ಬಹು ಬಲಿಷ್ಠವಾಗಿ ಮೇಲೆದ್ದು ನಿಂತಿದೆ. ಯಾಕೆಂದರೆ ಈ ರಾಷ್ಟ್ರವು ಕೇವಲ ತುಂಡು ನೆಲವಲ್ಲ, ಒಂದು ಸಜೀವ ಆತ್ಮ, ಇಡೀ ಭೂಲೋಕದ ಆಧ್ಯಾತ್ಮಿಕ ಜ್ಞಾನದ ಅಧಿದೇವತೆ. ಭಾರತಮಾತೆ ಲೋಕಗುರು, ಜಗಜ್ಜನನಿ ಎನ್ನುವುದನ್ನು ಮರೆಯಲಾಗದು. "ಈ ಮಹಾನ್ ಹಾಗೂ ಪ್ರಾಚೀನ ರಾಷ್ಟ್ರವು ಒಂದು ಕಾಲಕ್ಕೆ ಮಾನವತೆಯ ಬೆಳಕಿನ ಚಿಲುಮೆಯಾಗಿತ್ತು; ಮಾನವ ನಾಗರಿಕತೆಯ ತುತ್ತತುದಿಯಾಗಿತ್ತು; ವಿವೇಕ ಹಾಗೂ ತತ್ವಜ್ಞಾನಗಳ ಗುರುವಾಗಿತ್ತು" ಎನ್ನುವ ಅರವಿಂದರು ಈ ನೆಲದ ಗುಣ ವಿಶೇಷವನ್ನು ವಿಶ್ವಕ್ಕೆ ತೋರಿಸಿದ್ದರು. ಈ ನೆಲದ ಜ್ಞಾನ, ಚಾರಿತ್ರ್ಯ ಮತ್ತು ಉದಾತ್ತ ಚಿಂತನೆಗಳು ಭಾರತಕ್ಕಾಗಿ ಮಾತ್ರವಲ್ಲ ಜಗತ್ತಿಗಾಗಿ ಉಳಿಸಿಕೊಳ್ಳಬೇಕಾದುದು. ಯಾಕೆಂದರೆ, "ಭಾರತ ವಿಶ್ವರಾಷ್ಟ್ರಗಳ ಗುರು. ಮಾನವನಾತ್ಮದ ಗಂಭೀರ ರೂಪದ ವ್ಯಾಧಿಗಳ ಧನ್ವಂತರಿ. ಭಾರತವು ಜಗತ್ತಿನ ಜೀವನವನ್ನು ಪುನರ್ರೂಪಿಸಲು ಬೇಕಾಗಿದೆ. ಮಾನವತೆಗಾಗಿ ನಾವು ಮಾಡಬೇಕಾಗಿರುವ ಕಾರ್ಯವನ್ನು ಬೇರಾವ ದೇಶವೂ ಮಾಡಲು ಸಾಧ್ಯವಾಗದು. ಭಾರತವು ಒಂದು ಭವ್ಯ ಆಧ್ಯಾತ್ಮಿಕ ಪ್ರಯೋಗಾಲಯವಾಗಿದೆ" ಎನ್ನುವ ವಿಶ್ವಾಸದ ನುಡಿಗಳಲ್ಲಿ ಅರವಿಂದರು ಭಾರತದ ಚಿತ್ರಣವನ್ನು ನೀಡಿದ್ದರು. ಈ ಮಾತುಗಳನ್ನು ಹೇಳತ್ತಲೇ ಭಾರತಕ್ಕೆ ಎಚ್ಚರಿಕೆಯನ್ನೂ ನೀಡಿದ್ದರು. ಬಹುಶಃ ನಮ್ಮನ್ನಾಳಿದ ವ್ಯವಸ್ಥೆ ಅರವಿಂದರ ಮಾತಿಗೆ ಕಿವಿಯಾಗದ ಪರಿಣಾಮವನ್ನು ನಾವಿಂದು ನೋಡುತ್ತಿದ್ದೇವೆ. "ಭಾರತವು ಯುರೋಪಿನ ಹೆಜ್ಜೆಗಳನ್ನು ಅನುಸರಿಸಿದರೆ, ಐರೋಪ್ಯ ರಾಜಕೀಯ ಆದರ್ಶಗಳನ್ನು, ಸಾಮಾಜಿಕ ವ್ಯವಸ್ಥೆಯನ್ನು, ಆರ್ಥಿಕ ತತ್ವಗಳನ್ನು ಅಂಗೀಕರಿಸಿದರೆ ಅದೇ ಜಾಡ್ಯಗಳಿಗೆ ತಾನೂ ಗುರಿಯಾಗುತ್ತದೆ. ಯಾವುದೇ ರಾಷ್ಟ್ರವು ತನ್ನಸ್ತಿತ್ವದ ಉದ್ದೇಶವನ್ನೇ ಬಿಟ್ಟುಕೊಟ್ಟು ವಿಕಾಸಗೊಳ್ಳುವುದು ಅಸಾಧ್ಯ. ಭಾರತ ತನ್ನ ಭವಿತವ್ಯವನ್ನು ಸಾಧಿಸಬೇಕಾದರೆ ಭಾರತವಾಗಿಯೇ ಉಳಿಯಬೇಕು" ಎಂದಿದ್ದರು. ಆದರೆ ನಾವೆಷ್ಟು ಕಿವಿಗೊಟ್ಟು ಕೇಳಿದ್ದೇವೆ?

"ಭಾರತದ ಉತ್ಥಾನವೆಂದರೆ ಸನಾತನ ಧರ್ಮದ ಉತ್ಥಾನವೇ ಆಗಿದೆ. ಭಾರತದ ಹಿರಿಮೆ ಎಂದರೆ ಸನಾತನ ಧರ್ಮದ ಹಿರಿಮೆಯೆಂದೇ

....2ನೇ ಪುಟಕ್ಕೆ

## ಸಂಸ್ಮರಣೆ ವಿಕ್ರಮ್ ಬಾತ್ರಾ (9.9.1974–7.7.1999)


ಸೆಪ್ಟೆಂಬರ್ 9, 1974 ರಂದು, ವಿಕ್ರಮ್ ಬಾತ್ರಾ ಅವರು ಹಿಮಾಚಲ ಪ್ರದೇಶದ ಪಾಲಂಪುರ್ ಗ್ರಾಮದಲ್ಲಿ ಗಿರ್ಧಾರಿ ಲಾಲ್ ಬಾತ್ರಾ ಮತ್ತು ಕಮಲ್ ಕಾಂತ ಬಾತ್ರಾ ದಂಪತಿಗೆ ಜನಿಸಿದರು. ವಿಕ್ರಮ್ ಅವರ ತಂದೆ ಗಿರ್ಧಾರಿ ಲಾಲ್ ಬಾತ್ರಾ ಅವರು ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದರು ಮತ್ತು ವಿಕ್ರಮ್ ಅವರ ತಾಯಿ ಕಮಲ್ ಕಾಂತ ಬಾತ್ರಾ ಸಹ ಶಿಕ್ಷಕರಾಗಿದ್ದರು.

ವಿಕ್ರಮ್ ಅವರ ಕೇಂದ್ರೀಯ ವಿದ್ಯಾಲಯವು ಆರ್ಮಿ ಪ್ರದೇಶದಲ್ಲಿದ್ದುದರಿಂದ ಅವರು ಪ್ರತಿದಿನ ಸೈನ್ಯದ ತರಬೇತಿ, ಶಿಸ್ತು ಮತ್ತು ಇತರ ವಿಷಯಗಳನ್ನು ನೋಡುತ್ತಿದ್ದರು, ಇದು ಸೈನ್ಯಕ್ಕೆ ಸೇರುವ ಬಯಕೆಯನ್ನು ಹುಟ್ಟುಹಾಕಿತು.

ಅವರು 1996 ರಲ್ಲಿ ಸೈನ್ಯಕ್ಕೆ ಪ್ರವೇಶಿಸಲು ಕಂಬೈನ್ಡ್ ಡಿಫೆನ್ಸ್ ಸರ್ವಿಸಸ್ (ಅಆಖ) ಪರೀಕ್ಷೆಯನ್ನು ಪೂರ್ಣಗೊಳಿಸಿದರು ಮತ್ತು ಅಲಹಾಬಾದ್‌ನಲ್ಲಿನ ಸೇವೆಗಳ ಆಯ್ಕೆ ಮಂಡಳಿಯು ಅವರನ್ನು ಆಯ್ಕೆ ಮಾಡಿತು. ಅವರು ಪರೀಕ್ಷೆಯ ಟಾಪ್ 35 ಅಭ್ಯರ್ಥಿಗಳಲ್ಲಿ ಒಬ್ಬರಾಗಿದ್ದರು. ಮಾರ್ಚ್ 1998 ರಲ್ಲಿ ಮಧ್ಯಪ್ರದೇಶದ ಪದಾತಿಸೈನ್ಯದ ಶಾಲೆಯಲ್ಲಿ ಐದು ತಿಂಗಳ ಯಂಗ್ ಆಫೀಸರ್ಸ್ ಕೋರ್ಸ್‌ಗೆ ನಿಯೋಜಿತರಾದರು. ಅವರ ತರಬೇತಿಯ ನಂತರ, ಅವರನ್ನು ಡಿಸೆಂಬರ್ 6, 1997 ರಂದು ಸೋಪೋರ್‌ನಲ್ಲಿ ಸೇನೆಯ 13 ಜಮ್ಮು ಮತ್ತು ಕಾಶ್ಮೀರ ರೈಫಲ್ಸ್‌ನಲ್ಲಿ ಲೆಫ್ಟಿನೆಂಟ್ ಆಗಿ ನೇಮಿಸಲಾಯಿತು.


ಅವರ ಘಟಕವನ್ನು ಜೂನ್ 1, 1999 ರಂದು ಕಾರ್ಗಿಲ್ ಯುದ್ಧಕ್ಕೆ ಕಳುಹಿಸಲಾಯಿತು. ಹಂಪ್ ಮತ್ತು ರಾಕಿ ನಾಬ್ ಸ್ಥಳಗಳನ್ನು ಶತ್ರುಗಳಿಂದ ಮುಕ್ತಗೊಳಿಸಿದ ನಂತರ ವಿಕ್ರಮ್ ಕ್ಯಾಪ್ಟನ್ ಆಗಿ ಬಡ್ತಿ ಪಡೆದರು. ಕ್ಯಾಪ್ಟನ್ ಬಾತ್ರಾ ಅವರ ತುಕಡಿಯು ಶ್ರೀನಗರ–ಲೇಹ್ ಮಾರ್ಗದ ಮೇಲಿರುವ ಅತ್ಯಂತ ಪ್ರಮುಖವಾದ ಪರ್ವತವಾದ 5140 ಅನ್ನು ಪಾಕಿಸ್ತಾನಿ ಪಡೆಗಳಿಂದ ಮುಕ್ತಗೊಳಿಸುವ ಕಾರ್ಯವನ್ನು ನಿರ್ವಹಿಸಿತು.

ಇದು ಸವಾಲಿನ ಭೂಪ್ರದೇಶವಾಗಿದ್ದರೂ ಸಹ, ವಿಕ್ರಮ್ ಬಾತ್ರಾ ಮತ್ತು ಅವರ ಪಡೆ ಜೂನ್ 20, 1999 ರಂದು ಮುಂಜಾನೆ 3.30 ಕ್ಕೆ ಶಿಖರವನ್ನು ತಲುಪಿದರು. ನಾಯಕ ವಿಕ್ರಮ್ ಬಾತ್ರಾ ಕಠಿಣ ಮುಖಾಮುಖಿ ಯುದ್ಧದಲ್ಲಿ ಸಂಘರ್ಷದ ಸಮಯದಲ್ಲಿ ಪಾಯಿಂಟ್ ಬ್ಲಾಕ್ ರೇಂಜ್‌ನಲ್ಲಿ ಐದು ಶತ್ರು ಸೈನಿಕರನ್ನು ಕೊಂದರು. ಶತ್ರು ಸ್ನೈಪರ್‌ನಿಂದ ಗುಂಡಿನ ದಾಳಿಗೆ ಒಳಗಾದ ನಂತರ ಅವರು ತೀವ್ರವಾಗಿ ಗಾಯಗೊಂಡರು. ಇದಾದ ಬಳಿಕವೂ ತೆವಳಿಕೊಂಡು ಬಂದು ಎದುರಾಳಿಗಳ ಮೇಲೆ ಗ್ರೆನೇಡ್ ಎಸೆದು ಕೊಂದರು. ಈ ಹೋರಾಟದ ಮುಂಚೂಣಿಯಲ್ಲಿರುವ ಮೂಲಕ ಅವರು ಅಸಾಧ್ಯವಾದ ಕಾರ್ಯಾಚರಣೆಯನ್ನು ಸಾಧಿಸಿದರು.



ಕ್ಯಾಪ್ಟನ್ ವಿಕ್ರಮ್ ಬಾತ್ರಾ ಅವರ ವಿಜಯದ ವೃತ್ತಾಂತಗಳನ್ನು ಈ ಪರ್ವತದಿಂದ ರೇಡಿಯೊದಲ್ಲಿ ಪ್ರಸಾರ ಮಾಡಲಾಯಿತು ಮತ್ತು ಅವರು ಅದನ್ನು 'ದಿಲ್ ಮಾಂಗೆ ಮೋರ್' ಎಂದು ಕರೆದರು. ಅವರ ಹೆಸರು ಸೇನೆಯಲ್ಲಿ ಮಾತ್ರವಲ್ಲದೆ ಭಾರತದಾದ್ಯಂತ ಆವರಿಸಿಕೊಂಡಿತು. ಆದರೆ ದೇಶದ ಮತ್ತು ದೇಶವಾಸಿಗಳ ರಕ್ಷಣೆಯ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತಮ್ಮ ಪ್ರಾಣವನ್ನೇ ಅರ್ಪಿಸಿದರು. ಅಮರರಾದರು. ದೇಶಕ್ಕಾಗಿ ತನ್ನ ಪ್ರಾಣಾರ್ಪಣೆ ಮಾಡಿದಾಗ ವಿಕ್ರಮ್ ಬಾತ್ರಾಗೆ ಕೇವಲ 25ರ ಹರೆಯ.

## ಧಮ್ಮಪದ



ಪುಸ್ತಕ ಪರಿಚಯ

ಬುದ್ಧ ಆಧ್ಯಾತ್ಮದ ಮಹಾನ್ ಸಾಧಕ. ಅಧ್ಯಾತ್ಮದ ಸ್ಪರ್ಶವಿಲ್ಲದ ಜ್ಞಾನದಿಂದ ಹೆಚ್ಚೇನೂ ಲಾಭವಿಲ್ಲ ಎನ್ನುವುದನ್ನು ಅರಿತವನು. ಬುದ್ಧ ಪ್ರೇಮದ ಸಂದೇಶವನ್ನು ಜಗತ್ತಿಗೆಲ್ಲಾ ಸಾರಿದ. ಆತನು ಜೇತವನದಲ್ಲಿ ಶ್ರವಣರಿಗೆ ನೀಡಿದ ಸಂದೇಶಗಳ ಸಾರಸಂಗ್ರಹವೇ ಧಮ್ಮಪದ. ಎರಡೂವರೆ ಸಾವಿರ ವರ್ಷಗಳ ಹಿಂದೆ ಭಗವಾನ್ ಬುದ್ಧ ಹೇಳಿದ ಸರಳತೆ, ಜ್ಞಾನ, ಚಿತ್ತ ನಿಯಂತ್ರಣ, ಸತ್ಯ ಧರ್ಮಗಳ ಮೇಲಿನ ಬೋಧನೆಗಳು ಇಂದಿಗೂ ಪ್ರಸ್ತುತ. ಬೌದ್ಧ ದರ್ಶನಕ್ಕೂ, ಸನಾತನ ಧರ್ಮಕ್ಕೂ ಶತಮಾನಗಳ ತಿಕ್ಕಾಟ, ಸಂಘರ್ಷವಿದೆ ಎಂದು ಬಿಂಬಿಸಲಾಗುತ್ತಿದೆ. ಇದು ಸಂಪೂರ್ಣ ಸುಳ್ಳುಕಥನ ಎನ್ನುವುದನ್ನು ಧಮ್ಮಪದ ಸಾರುತ್ತದೆ. ಭಾರತದಲ್ಲಿ ಒಂದು ವರ್ಗ ನಿರಂತರವಾಗಿ ಅಪವ್ಯಾಖ್ಯಾನಗಳನ್ನು ಮಾಡುತ್ತ ಬಂದಿದ್ದರಿಂದ ಹಿಂದೂಗಳಲ್ಲೇ ಬುದ್ಧನ ಬಗ್ಗೆ ಅನಾದಾರವಿದೆ. ಬುದ್ಧನ ಬೋಧನೆಗಳೆಲ್ಲವೂ ಸನಾತನ ಧರ್ಮಕ್ಕೆ ಪೂರಕವಾಗುತ್ತವೆ. ಬುದ್ಧನ ಅನಾತ್ಮವಾದವನ್ನು ಈಗಿನವರು ಅರ್ಥೈಸಿಕೊಂಡಿರುವ ಆತ್ಮದ ಅಸ್ತಿತ್ವವನ್ನು ನಿರಾಕರಿಸುವ ಸಿದ್ಧಾಂತವಲ್ಲ. ಬುದ್ಧನು ಆತ್ಮ ಪುನರ್ಜನ್ಮ ಪಾಪ – ಪುಣ್ಯ ಇತ್ಯಾದಿ ಅಂಶಗಳನ್ನು ಪುರಸ್ಕರಿಸಿದ್ದಾನೆ. ಇಂತಹ ಅನೇಕ ವ್ಯಾಖ್ಯಾನಗಳನ್ನು ಮೀರಿದ ಸತ್ಯದರ್ಶನವನ್ನು ಧಮ್ಮಪದ ಮಾಡಿಕೊಡುತ್ತದೆ.

ಲೇಖಕರು : **ಡಾ.ಜಿ.ಬಿ.ಹರೀಶ**
ಪ್ರಕಾಶಕರು : **ಅಯೋಧ್ಯಾ ಪಬ್ಲಿಕೇಶನ್ಸ್**
ಬೆಲೆ : **120/–**

ವೆಬ್‌ಸೈಟ್ ಲಿಂಕ್ : https://www.ayodhyabooks.com/product/bhagavan-buddana-dammapada/

## ಲೋಕಕ್ಕೆ ಬೆಳಕು ನೀಡಬಲ್ಲ ವಿಶ್ವಗುರು ಭಾರತ

1ನೇ ಪುಟದಿಂದ...

ಅರ್ಥ. ಭಾರತವು ವಿಸ್ತಾರಗೊಂಡು ಬೆಳೆಯುವುದೆಂದರೆ ಸನಾತನ ಧರ್ಮವು ವಿಸ್ತಾರಗೊಂಡು ವಿಶ್ವದೆಲ್ಲೆಡೆ ಹರಡುವುದು ಎಂದು. ಭಾರತದ ಅಸ್ತಿತ್ವವು ಧರ್ಮದಿಂದಾಗಿ, ಧರ್ಮಕ್ಕಾಗಿ" ಎಂದಿದ್ದ ಮಹರ್ಷಿಯ ಮಾತನ್ನು ಮರೆಯಬಾರದು. ಭಾರತದ ಹಿರಿಮೆಗೆ ಕಾರಣವಾದ ಬಹುಮುಖ್ಯ ಸಂಗತಿ ಎಂದರೆ ಇಲ್ಲಿನ ಆಧ್ಯಾತ್ಮಿಕ ಜಾಗೃತಿ. ಈ ರಾಷ್ಟ್ರದ ನಿಜ ಆತ್ಮಭಾವದ ಪುನರ್ ಜಾಗೃತಿ ಮುಖ್ಯ. ಇಂತಹ ಭಾರತ ಇಚ್ಛಿಸಿದರೆ ಜಗತ್ತಿಗೆ ಮಾರ್ಗದರ್ಶಕವಾಗಬಲ್ಲದು. ಭಾರತವು ಮಾನವ ಜನಾಂಗದ ಭವಿಷ್ಯದ ಕೀಲಿಕೈ ಹೊಂದಿದೆ ಎನ್ನುವುದು ಅನೇಕ ದಾರ್ಶನಿಕರ ನಂಬಿಕೆಯಾಗಿತ್ತು. ಈ ಭಾರತದ ಗತಕಾಲವನ್ನು ಸರಿಯಾಗಿ ಅಧ್ಯಯನ ಮಾಡಿದರೆ ಇದರ ಶಕ್ತಿ, ಸೃಷ್ಟಿ ಸಾಮರ್ಥ್ಯ ಅರ್ಥವಾಗುತ್ತದೆ. ಇದನ್ನು ಅರಿತುಕೊಳ್ಳಬೇಕಾಗಿದೆ. ಜಗತ್ತಿನ ಯಾವ ನಾಗರಿಕತೆಗಳಿಗಿಲ್ಲದ ಅಗಾಧವಾದ ಜೀವಂತಿಕೆ, ಅಕ್ಷಯ ಜೀವನಶಕ್ತಿ, ಸಮೃದ್ಧ ಸೃಜನಶೀಲತೆ ಈ ನೆಲಕ್ಕಿದೆ. ಸಾವಿರ ಸಾವಿರ ವರ್ಷಗಳಿಂದ ಸೃಷ್ಟಿಸಿದ ಗಣತಂತ್ರ, ರಾಜ್ಯ–ಸಾಮ್ರಾಜ್ಯಗಳು, ತತ್ವಶಾಸ್ತ್ರ, ವಿಜ್ಞಾನ, ಕಲೆ, ಕಾವ್ಯಗಳು, ಅರಮನೆ, ದೇಗುಲಗಳು, ಸಂಹಿತೆ, ಪದ್ಧತಿಗಳು, ಭೌತವಿಜ್ಞಾನ, ಮನೋವಿಜ್ಞಾನಗಳೂ ಸೇರಿದಂತೆ ಬಹುಮುಖಿತ್ವದ ಸೃಷ್ಟಿಶೀಲತೆಯೇ ಈಕೆಯ ಶಕ್ತಿ. ಈಕೆಗೆ ಇದರಿಂದ ದಣಿವಾಗಿಲ್ಲ ಎನ್ನುವುದನ್ನು ಶ್ರೇಷ್ಠ ಮಹನೀಯರು ಗುರುತಿಸಿದ್ದಾರೆ. ಹೀಗಾಗಿಯೇ ಮನುಕುಲವು ಎದುರಿಸುತ್ತಿರುವ, ಬಳಲುತ್ತಿರುವ ಸಮಸ್ಯೆಗಳಿಗೆ ಭಾರತವು ಇಚ್ಛಿಸಿದರೆ ನಿರ್ಣಾಯಕ ತಿರುವನ್ನು ಕೊಡಬಲ್ಲದು. ಏಕೆಂದರೆ ಅವುಗಳ ಪರಿಹಾರದ ಸುಳಿವು ಭಾರತದ ಪ್ರಾಚೀನ ಜ್ಞಾನದಲ್ಲಿದೆ. ಭಾರತ ಈ ಹಿಂದೆಯೂ ತನ್ನೊಳಗಿನ ಅನಂತ ಶಕ್ತಿಯಿಂದ ಮಹಾನತೆಯನ್ನು ಸಾಧಿಸಿದೆ. ಹಾಗೆಯೇ ಭಾರತೀಯ ನಾಗರಿಕತೆಯು ಈಗಲೂ ಸಹ ಪುನಃ ಮೇಲೆದ್ದು ಬರಲಿದೆ. ಆದರೆ ಚಿಂತನ ಶಕ್ತಿಯ ಕ್ಷೀಣಿಸುವಿಕೆಯೇ ಭಾರತದ ದೌರ್ಬಲ್ಯಕ್ಕೆ ಮುಖ್ಯ ಕಾರಣ. ನಮ್ಮ ವರ್ತಮಾನದ ಶಿಕ್ಷಣ ವಲಯ, ಬೌದ್ಧಿಕ ವಲಯ ಚಿಂತನ ಶಕ್ತಿಗೆ ಕವಿದಿರುವ ಈ ದೌರ್ಬಲ್ಯವನ್ನು ಮೀರುವಂತೆ ಸೃಷ್ಟಿಶೀಲವಾಗಬೇಕಾಗಿದೆ. ಈ ದೌರ್ಬಲ್ಯವನ್ನು ಭಾರತವು ಮೀರಬಹುದಾದರೆ ಮತ್ತೊಮ್ಮೆ ವಿಶ್ವಗುರುವೇ ಆಗಬಲ್ಲದು.

**–ಡಾ. ರೋಹಿಣಾಕ್ಷ ಶಿರ್ಲಾಲು,**
ಸಹಾಯಕ ಪ್ರಾಧ್ಯಾಪಕರು
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ

## ಎಲ್ಲೋ ಕೇಳಿದ ಕಥೆ

### ಇದು ಸಂಘದ ಶಿಸ್ತು

ನಾಗಪುರದಿಂದ ಕೆಲವು ಮೈಲುಗಳ ದೂರ ಅಂಬಾಝುರಿ ಕೆರೆಯ ದಕ್ಷಿಣದಲ್ಲಿರುವ ವಿಶಾಲ ಬಯಲು ಪ್ರದೇಶದಲ್ಲಿ ಸಂಘದ ಶಿಬಿರವೊಂದು ಏರ್ಪಾಡಾಗಿತ್ತು. ಐದು ದಿನಗಳ ಈ ಶಿಬಿರದಲ್ಲಿ ಸುಮಾರು ಎರಡು ಸಾವಿರದಷ್ಟು ತರುಣರು, ಬಾಲಕರು ಪಾಲ್ಗೊಂಡಿದ್ದರು. ಶಿಬಿರದ ಪಕ್ಕದಲ್ಲಿ ಒಂದು ಸೊಗಸಾದ ಕಿತ್ತಳೇ ತೋಟ. ಅದರ ಮಾಲಿಕ ದಿಲಾವರ ಖಾನ್ ಎಂಬೋರ್ವ ಮುಸಲ್ಮಾನ ಸಜ್ಜನ. ಶಿಬಿರ ಮುಗಿಯುವ ಹೊತ್ತಿಗೆ ತನ್ನ ತೋಟದಲ್ಲಿ ಒಂದು ಹಣ್ಣೂ ಉಳಿಯಲಾರದೆಂದು ಅವನು ಗಾಬರಿಗೊಂಡಿದ್ದ. ಆದರೆ ಏನೂ ಮಾಡಲಾಗದವನಾಗಿಯೂ ಇದ್ದ.

ಶಿಬಿರದ ಆರಂಭದಲ್ಲೆ ಡಾಕ್ಟರಜಿಯವರು ಶಿಬಿರಾರ್ಥಿಗಳಿಗೆ ನಿಯಮಗಳು, ಶಿಸ್ತಿನ ಪಾಲನೆ ಇತ್ಯಾದಿ ಸಂಬಂಧಿತ ಸೂಚನೆಗಳನ್ನು ತಿಳಿಸಿದರು. ಅದರಲ್ಲಿ ಮುಖ್ಯವಾಗಿ ಸುತ್ತಮುತ್ತ ಇರುವ ಗಿಡಗಳಿಗೆ ಯಾರೂ ಕೈ ಸಹ ಹಚ್ಚಬಾರದೆಂದು ಒತ್ತಿ ಹೇಳಿದರು. ಅದರಂತೆ ಎಲ್ಲರೂ ಸಹ ಪೂರಾ ನಿಷ್ಠೆಯಿಂದ ನಡೆದುಕೊಂಡರು. ಇದ್ದವರೆಲ್ಲ ಕಿಶೋರರು, ತರುಣರೇ ಆಗಿದ್ದರೂ. ತೋಟದಲ್ಲಿನ ಹಣ್ಣಿರಲಿ, ಒಂದೇ ಒಂದು ಎಲೆ ಸಹ ಮುಟ್ಟಲಿಲ್ಲ.

ದಿಲಾವರ ಖಾನ್‌ಗೆ ಆಶ್ಚರ್ಯವೋ ಆಶ್ಚರ್ಯ! ಅವನಿಗದು ಅಕಲ್ಪನೀಯವಾಗಿದ್ದ ಅನುಭವ. ಶಿಬಿರ ಮುಗಿಯುವ ಮೊದಲು ಅವನು ಸ್ವತಃ ಡಾಕ್ಟರಜಿಯವರನ್ನು ಕಾಣಲು ಬಂದ. ತನ್ನ ಮನದಿಂದ ಉಕ್ಕಿಹರಿದ ಭಾವನೆಗಳನ್ನು ವ್ಯಕ್ತಪಡಿಸುತ್ತ ಅವನು ಡಾಕ್ಟರಜಿಯವರ ಬಳಿ "ಇಲ್ಲಿರುವಷ್ಟು ಜನ ನನ್ನ ಜಾತಿಯವರೇ ಆಗಿದ್ದರೂ, ನನ್ನ ತೋಟ ಉಳಿಯಬಹುದೆಂಬ ಭರವಸೆ ನನಗಿರಲಿಲ್ಲ. ನಿಮ್ಮ ಅನುಯಾಯಿಗಳು ತೋರಿದ ಶಿಸ್ತು ಸಂಯಮದ ಬಗ್ಗೆ ಕೃತಜ್ಞತೆ ತಿಳಿಸಲು ನನ್ನ ಬಳಿ ಶಬ್ದಗಳೇ ಇಲ್ಲ" ಎಂದು ಭಾವಭರಿತನಾಗಿ ಹೇಳಿದ. "ತನ್ನ ಸಂತಸಕ್ಕೆ ಕಾರ್ಯರೂಪ ನೀಡಲು ಅವನೇ ಬುಟ್ಟಿಗಳಲ್ಲಿ ಹಣ್ಣುಗಳನ್ನು ತುಂಬಿಸಿ ತಂದು ಎಲ್ಲ ಸ್ವಯಂಸೇವಕರಿಗೆ ಹಂಚಿದ.





**ಬಿಪರ್‌ಜಾಯ್ ಚಂಡಮಾರುತದಿಂದ ಹಾನಿಗೊಳಗಾದ ಪ್ರದೇಶಗಳಲ್ಲಿ ಸೇವಾ ನಿರತ ಆರ್.ಎಸ್.ಎಸ್. ಸ್ವಯಂಸೇವಕರು.**

**ಸಂಪಾದಕೀಯ ಸಹಕಾರ:** ಅರುಣ್ ಕಿರಿಮಂಜೇಶ್ವರ, ಶೈಲೇಶ್ ಕುಲಕರ್ಣಿ, ತನ್ಮಯೀ ಪ್ರೇಮಕುಮಾರ್, ವಿನಯ್ ಕೃಷ್ಣ ಹೆಚ್.ವಿ.

# ಸಾಲುದ್ದದ ಸುದ್ದಿಗಳು

## ಗರ್ಭಿಣಿಯರು ರಾಮಾಯಣವನ್ನು ಓದಬೇಕು – ತಮಿಳಿಸೈ ಸೌಂದರರಾಜನ್



ಮಾನಸಿಕ ಹಾಗೂ ದೈಹಿಕ ಸದೃಢ ಮಕ್ಕಳನ್ನು ಪಡೆಯುವುದಕ್ಕಾಗಿ ಗರ್ಭಿಣಿಯರು ರಾಮಾಯಣದ ಸುಂದರಕಾಂಡವನ್ನು ಪಠಿಸಬೇಕು. ವೈಜ್ಞಾನಿಕ ಮತ್ತು ಸಮಗ್ರ ಅನುಷ್ಠಾನದ ದೃಷ್ಟಿಯಿಂದ ಈ ಪ್ರಕ್ರಿಯೆ ಧನಾತ್ಮಕ ಫಲಿತಾಂಶವನ್ನು ನೀಡುತ್ತದೆ ಎಂದು ತೆಲಂಗಾಣದ ರಾಜ್ಯಪಾಲರಾದ ತಮಿಳಿಸೈ ಸೌಂದರರಾಜನ್ ಹೇಳಿದ್ದಾರೆ. ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಂಗ ಸಂಸ್ಥೆ ಸಂವರ್ಧಿನಿ ನ್ಯಾಸ್ ಆರಂಭಿಸಿರುವ ಗರ್ಭಸಂಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ.

## ಧಾರ್ಮಿಕ ಮತಾಂತರಕ್ಕೆ ಬಾಲಿವುಡ್ ಕಾರಣ: ನಿಯಾಜ್ ಖಾನ್

ಮಧ್ಯಪ್ರದೇಶ ಕೇಡರ್‌ನ ಐಎಎಸ್ ಅಧಿಕಾರಿ ನಿಯಾಜ್ ಖಾನ್ ಭಾರತದಲ್ಲಿ ನಡೆಯುತ್ತಿರುವ ಧಾರ್ಮಿಕ ಮತಾಂತರಕ್ಕೆ ಬಾಲಿವುಡ್ ಕಾರಣ ಎಂದು ಹೇಳಿದ್ದಾರೆ. ಟ್ವಿಟರ್‌ನಲ್ಲಿ ಅವರು ಮುಸ್ಲಿಂ ಬಾಂಧವರು ಹಸುಗಳನ್ನು ಸಾಕಬೇಕು ಮತ್ತು ಸಸ್ಯಾಹಾರವನ್ನು ತಮ್ಮ ಆಹಾರದಲ್ಲಿ ಅಳವಡಿಸಿಕೊಳ್ಳಬೇಕೆಂದಿದ್ದಾರೆ. ಮುಸ್ಲಿಮೇತರರನ್ನು ಇಸ್ಲಾಂಗೆ ಮತಾಂತರ ಮಾಡುವಂತೆ ಒತ್ತಾಯಿಸಬಾರದು ಎಂದು ಹೇಳಿದರು.

## ಅಮೆರಿಕಾದಲ್ಲಿ ಹಿಂದೂಗಳ ಶಕ್ತಿಯು ಪ್ರಬಲವಾಗಿದೆ: ಶೀಲಾ ಜಾಕ್ಸನ್ ಲೀ

ಯುನೈಟೆಡ್ ಸ್ಟೇಟ್ಸ್‌ನಲ್ಲಿ ಹಿಂದೂಗಳ ಶಕ್ತಿಯು ಪ್ರಬಲವಾಗಿದೆ. ಅಮೆರಿಕದಾದ್ಯಂತ ಇರುವ ಎಲ್ಲಾ ಹಿಂದೂಗಳೊಂದಿಗೆ ಒಗ್ಗೂಡಿ ಕೆಲಸ ಮಾಡುವ ಅವಶ್ಯಕತೆಯಿದೆ. ಆಗ ಅದು ಪ್ರಬಲ ಶಕ್ತಿಯಾಗಲಿದೆ ಎಂದು ಅಮೆರಿಕದ ಕಾಂಗ್ರೆಸ್ ಸದಸ್ಯೆ ಶೀಲಾ ಜಾಕ್ಸನ್ ಲೀ ಮೊಟ್ಟಮೊದಲ ಹಿಂದೂ–ಅಮೆರಿಕನ್ ಶೃಂಗಸಭೆಯಲ್ಲಿ ಅಭಿಪ್ರಾಯಪಟ್ಟರು.

## 2021ರ ಗಾಂಧಿ ಶಾಂತಿ ಪುರಸ್ಕಾರದ ನಗದು ಸ್ವೀಕರಿಸದಿರಲು 'ಗೀತಾ ಪ್ರೆಸ್' ನಿರ್ಧಾರ




1 ಕೋಟಿ ರೂಪಾಯಿ ನಗದು ಬಹುಮಾನವನ್ನು ಒಳಗೊಂಡ 2021 ರ ಗಾಂಧಿ ಶಾಂತಿ ಪ್ರಶಸ್ತಿಯನ್ನು ವಿಶ್ವದ ಅತಿದೊಡ್ಡ ಪ್ರಕಾಶಕರಲ್ಲಿ ಒಂದಾದ ಗೋರಖ್‌ಪುರದ ಗೀತಾ ಪ್ರೆಸ್‌ಗೆ ಘೋಷಿಸಲಾಗಿದೆ. ಆದರೆ ಗೀತಾ ಪ್ರೆಸ್ ಕೇವಲ ಸ್ಮರಣಿಕೆಯನ್ನು ಮಾತ್ರ ಸ್ವೀಕರಿಸುತ್ತೇವೆ, ನಗದು ಮೊತ್ತವನ್ನು ಸ್ವೀಕರಿಸುವುದಿಲ್ಲ ಎಂದು ಹೇಳಿದೆ. ಪ್ರಧಾನಿ ಮೋದಿ ನೇತೃತ್ವದ ತೀರ್ಪುಗಾರರ ಸಮಿತಿಯು ಸರ್ವಾನುಮತದಿಂದ ನಿರ್ಧರಿಸಿ ಶತಮಾನೋತ್ಸವದ ಸಂದರ್ಭದಲ್ಲಿರುವ ಗೀತಾ ಪ್ರೆಸ್ ಅನ್ನು ಆಯ್ಕೆ ಮಾಡಿತು. ಪ್ರಕಾಶಕರು ಆದರೆ ನಗದು ಬಹುಮಾನದ ಮೊತ್ತವನ್ನು ಬೇರೆ ಉದ್ದೇಶಕ್ಕೆ ಖರ್ಚು ಮಾಡಬೇಕೆಂದು ಸೂಚಿಸಿದೆ.

## ಆಹಾರದ ಕೊರತೆಯನ್ನು ಅನುಭವಿಸಿದ 18 ರಾಷ್ಟ್ರಗಳಿಗೆ ಭಾರತ ನೆರವು: IFAD ಶ್ಲಾಘನೆ

ರಷ್ಯಾ–ಉಕ್ರೇನ್ ಸಂಘರ್ಷದ ಪರಿಣಾಮವಾಗಿ ಕಳೆದ ವರ್ಷ ತೀವ್ರ ಆಹಾರದ ಕೊರತೆಯನ್ನು ಅನುಭವಿಸಿದ 18 ರಾಷ್ಟ್ರಗಳಿಗೆ ಧಾನ್ಯ ಮತ್ತು 1.8 ಮಿಲಿಯನ್ ಟನ್ ಗೋಧಿಯನ್ನು ಮಾರಾಟ ಮಾಡಿದ ಭಾರತವನ್ನು ಕೃಷಿ ಅಭಿವೃದ್ಧಿಗಾಗಿ ವಿಶ್ವಸಂಸ್ಥೆಯ ನಿಧಿ (IFAD) ಶ್ಲಾಘಿಸಿದೆ. ಪ್ರಸಿದ್ಧ ಅಭಿವೃದ್ಧಿ ಹಣಕಾಸು ತಜ್ಞರಾದ ಲಾರಿಯೊ ಪ್ರಕಾರ, ಭಾರತೀಯ ಜ್ಞಾನವು ಜಾಗತಿಕ ದಕ್ಷಿಣದ ಇತರ ರಾಷ್ಟ್ರಗಳಿಗೆ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಗೆ ಸಹಾಯ ಮಾಡುತ್ತದೆ.



## ನೇತಾಜಿ ಪ್ರಯತ್ನಗಳು ಭವ್ಯ ಭಾರತದ ಅಚಲ ಕನಸಿನಿಂದ ಪ್ರೇರೇಪಿಸಲ್ಪಟ್ಟಿದ್ದವು: ದೋವಲ್

ಸುಭಾಷ್ ಚಂದ್ರ ಬೋಸ್ ಬದುಕಿದ್ದರೆ ಭಾರತ ವಿಭಜನೆಯಾಗುತ್ತಿರಲಿಲ್ಲ. ನೇತಾಜಿ ಅವರು ಜೀವನದ ವಿವಿಧ ಹಂತಗಳಲ್ಲಿ ಸಾಕಷ್ಟು ದಿಟ್ಟತನವನ್ನು ತೋರಿಸಿದವರು. ಎಂದು ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಹೇಳಿದ್ದಾರೆ. ಅಸೋಸಿಯೇಟೆಡ್ ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀ ಆಫ್ ಇಂಡಿಯಾ (ಅಸೋಚಾಮ್) ಆಯೋಜಿಸಿದ್ದ ಸುಭಾಷ್ ಚಂದ್ರ ಬೋಸ್ ಸ್ಮಾರಕ ಉಪನ್ಯಾಸದಲ್ಲಿ ಅವರು ಪಾಲ್ಗೊಂಡರು.

## ನೆಹರು ಮೆಮೋರಿಯಲ್ ಮ್ಯೂಸಿಯಂಗೆ ಮರುನಾಮಕರಣ ಮಾಡಿದ ಕೇಂದ್ರ

ರಾಷ್ಟ್ರ ರಾಜಧಾನಿ ನವದೆಹಲಿಯ ತೀನ್ ಮೂರ್ತಿ ಭವನದ ಆವರಣದಲ್ಲಿರುವ ನೆಹರು ಸ್ಮಾರಕ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸೊಸೈಟಿಯನ್ನು ಸರಕಾರವು ಪ್ರಧಾನಮಂತ್ರಿಗಳ ವಸ್ತುಸಂಗ್ರಹಾಲಯ ಮತ್ತು ಗ್ರಂಥಾಲಯ ಸೊಸೈಟಿ ಎಂದು ಮರುನಾಮಕರಣ ಮಾಡಿದೆ. ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ಅಧಿಕೃತ ನಿವಾಸವಾಗಿ ಸೇವೆ ಸಲ್ಲಿಸಿದ ತೀನ್ ಮೂರ್ತಿ ಭವನದ ಆವರಣದಲ್ಲಿ ಪ್ರಧಾನಿ ನರೇಂದ್ರ ಮೋದಿಯವರ ಪ್ರಧಾನಮಂತ್ರಿ ಸಂಗ್ರಹಾಲಯವನ್ನು ಉದ್ಘಾಟಿಸಿದ ಸುಮಾರು ಒಂದು ವರ್ಷದ ನಂತರ ಸೊಸೈಟಿಯನ್ನು ಮರುನಾಮಕರಣ ಮಾಡುವ ಕ್ರಮವು ಬಂದಿದೆ.

## ವಿಶ್ವಸಂಸ್ಥೆಯಲ್ಲಿ ಸಾಕಾರಗೊಂಡ ವಿಶ್ವ ಯೋಗ ದಿನ




ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ 9ನೇ ಅಂತರಾಷ್ಟ್ರೀಯ ಯೋಗದಿನವನ್ನು ಆಚರಿಸಲಾಯಿತು. ಈ ಕಾರ್ಯಕ್ರಮದ ನೇತೃತ್ವವನ್ನು ಭಾರತದ ಪ್ರಧಾನಿ ನರೇಂದ್ರ ಮೋದಿಯವರು ವಹಿಸಿದ್ದರು. ಈ ಬಾರಿಯ ಯೋಗ ದಿನದಲ್ಲಿ 180 ದೇಶಗಳ ಪ್ರತಿನಿಧಿಗಳು ಭಾಗವಹಿಸಿದ್ದು ಗಿನ್ನಿಸ್ ದಾಖಲೆಯಾಗಿದೆ. ಈ ಹಿಂದೆ 114 ದೇಶಗಳು ಭಾಗವಹಿಸಿದ್ದ ದಾಖಲೆ ಮುರಿಯಲಾಗಿದೆ. ಒಂದೇ ದಿನ 25 ಕೋಟಿ ಜನರಿಂದ ಯೋಗಾಭ್ಯಾಸ ಮಾಡಲಾಗಿದೆ.

ಪ್ರೇರಣಾ

# ಭಾರತ ಯಾತ್ರೆಯ ಮೂಲಕ 2 ಲಕ್ಷಕ್ಕೂ ಹೆಚ್ಚು ಗಿಡಗಳನ್ನು ನೆಟ್ಟ ಸ್ವಯಂಸೇವಕ

ಉತ್ತರ ಪ್ರದೇಶದ ಪ್ರತಾಪಗಢದ 29 ವರ್ಷದ ಸ್ವಯಂಸೇವಕ, ಸುಂದ್ರಮ್ ತಿವಾರಿ ಮುಂಬರುವ ಪೀಳಿಗೆಯ ಭವಿಷ್ಯವನ್ನು ಭದ್ರಪಡಿಸುವಲ್ಲಿ ನಿರತರಾಗಿದ್ದಾರೆ. ಅವರು ತಮ್ಮನ್ನು 'ಪರಿಸರವಾದಿ' ಎಂದು ಕರೆದುಕೊಳ್ಳಲು ಇಷ್ಟಪಡುವುದಿಲ್ಲ ಏಕೆಂದರೆ ಇದು ಸಾಕಷ್ಟು ಅಲಂಕಾರಿಕ ಪದವಾಗಿದೆ ಮತ್ತು ಹವಾನಿಯಂತ್ರಿತ ಕೋಣೆಗಳಲ್ಲಿ ಜನರನ್ನು ಭೇಟಿ ಮಾಡಬೇಕಾಗುತ್ತದೆ! ಸುಂದ್ರಮ್, ಇದಕ್ಕೆ ವಿರುದ್ಧವಾಗಿ, 'ಪ್ರಕೃತಿಮಾತೆಯನ್ನು' ರಕ್ಷಿಸುವ ಆಲೋಚನೆಗಳೊಂದಿಗೆ ಲಕ್ಷಾಂತರ ಜನರನ್ನು ಭೇಟಿ ಮಾಡಲು ಅರಣ್ಯ ಮತ್ತು ನಗರಗಳಿಗೆ ಭೇಟಿ ನೀಡುವ ಸಾಮಾನ್ಯ ವ್ಯಕ್ತಿ.

ಇತ್ತೀಚೆಗಷ್ಟೇ ಸುಂದ್ರಮ್‌ರವರು 18,000–ಕಿಲೋಮೀಟರ್ ಸೈಕಲ್ ಸವಾರಿಯು ಮುಕ್ತಾಯಗೊಳಿಸಿದರು. ಉತ್ತರ ಪ್ರದೇಶದಿಂದ ಏಪ್ರಿಲ್ 7, 2022 ರಂದು ತಮ್ಮ ಈ ಸೈಕಲ್ ಸವಾರಿಯನ್ನು ಪ್ರಾರಂಭಿಸಿ ಮತ್ತು



> ಸುಂದ್ರಮ್ ಅವರು ತಮ್ಮ ಸೈಕಲ್‌ನಲ್ಲಿ ಸುಮಾರು 14 ತಿಂಗಳು ಪ್ರಯಾಣಿಸಿ 2 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಟ್ಟರು, ಅವರು ನೆಟ್ಟ ಎರಡು ಲಕ್ಷ ಸಸಿಗಳಲ್ಲಿ ಬದುಕುಳಿಯುವ ಪ್ರಮಾಣವು 90 ಪ್ರತಿಶತವಾಗಿದೆ.

ಜೂನ್ 7, 2023 ರಂದು ದೆಹಲಿಯಲ್ಲಿ ಮುಕ್ತಾಯಗೊಳಿಸಿದರು. 14 ತಿಂಗಳ ದೀರ್ಘ ಅವಧಿಯಲ್ಲಿ ಸುಂದರಂ ಅವರ ಪಯಣ ಸುಂದರಗೊಂಡಿದ್ದು ಹೀಗೆ–

- 18,000 ಕಿಲೋಮೀಟರ್ಗಳು ಕ್ರಮಿಸಿದ್ದರು.
- 2 ಲಕ್ಷದ 24 ಸಾವಿರದ 41 ಸಸಿಗಳನ್ನು ನೆಟ್ಟಿದ್ದು ಅದರಲ್ಲಿ ಶೇ.90 ಇನ್ನೂ ಜೀವಂತವಾಗಿವೆ.
- 14 ತಿಂಗಳ ಅವಧಿಯಲ್ಲಿ ವಿವಿಧ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ 18 ಸಾವಿರದ 319 ಸಭೆಗಳಲ್ಲಿ ಪಾಲ್ಗೊಂಡಿದ್ದರು
- 10 ಸಾವಿರದ 224 ಗಂಟೆಗಳ ಕಾಲ ಸೈಕಲ್ ಪ್ರಯಾಣ.
- ಪ್ರತಿದಿನ ಸುಮಾರು 80 ರಿಂದ 120 ಕಿಲೋಮೀಟರ್ ಪ್ರಯಾಣಿಸುತ್ತಿದ್ದರು.
- ಅವರ 'ಭಾರತ ಯಾತ್ರೆ' ಯಲ್ಲಿ ಸುಮಾರು 10 ಲಕ್ಷ ಜನರೊಂದಿಗೆ ನೇರ ಸಂವಾದ ನಡೆಸಿದ್ದರು.
- ಪರಿಸರ ಕ್ಷೇತ್ರದಲ್ಲಿ ಪದ್ಮಭೂಷಣ ಮತ್ತು ಪದ್ಮಶ್ರೀ ಪ್ರಶಸ್ತಿ ಪಡೆದ ಗಣ್ಯರನ್ನು ಭೇಟಿ ಮಾಡಿ ತಮ್ಮ ವಿಚಾರಗಳನ್ನು ಹಂಚಿಕೊಂಡರು.
- ಯಾವುದೇ ಸರ್ಕಾರಿ ಅಥವಾ ಖಾಸಗಿ ಸಂಸ್ಥೆಯ ಬೆಂಬಲ ಅಥವಾ ಪ್ರಾಯೋಜಕತ್ವವಿಲ್ಲದೆ ತಮ್ಮ ಪ್ರಯಾಣವನ್ನು ಪೂರ್ಣಗೊಳಿಸಿದರು.



- ಈ 'ಭಾರತ್ ಯಾತ್ರಾ' ಯಾವುದೇ ಪೂರ್ವ ನಿಗದಿತ ಮತ್ತು ಸಂಘಟಿತ ಸ್ಥಳಗಳನ್ನು ಹೊಂದಿರದ ಈ ರೀತಿಯ ಒಂದಾಗಿದೆ, ಇದು ನಿಜವಾಗಿಯೂ ಭಾರತದ ಯಾತ್ರೆ. ಸುಂದ್ರಮ್‌ನಿಂದ ಪ್ರೇರಿತರಾದ ಜನರು ಈ ಯಜ್ಞದಲ್ಲಿ ಅವರೊಂದಿಗೆ ಸೇರಿಕೊಂಡರು ಮತ್ತು ಪ್ರಕೃತಿಯನ್ನು ಸಂರಕ್ಷಿಸಲು ತಮ್ಮ ಕೊಡುಗೆಯನ್ನು ನೀಡಿದರು.

  ಸುಂದ್ರಮ್‌ರವರು ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಲು ತಮ್ಮ ಪ್ರೇರಣೆಯನ್ನು ಹಂಚಿಕೊಳ್ಳುತ್ತಾ, ಒಂದು ದಿನ ಪತ್ರಿಕೆಯಲ್ಲಿ ದೇಶದ ವಾಯು ಗುಣಮಟ್ಟ ಸೂಚ್ಯಂಕವು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿರುವುದನ್ನು ಒದಿದ್ದರು. ಮರುದಿನ ಬೆಳಿಗ್ಗೆ ಅವರು ಹಳ್ಳಿಗಳಿಗೆ ಭೇಟಿ ನೀಡಿದಾಗ ಅಲ್ಲಿ ಗಾಳಿಯು ಶುದ್ಧವಾಗಿದ್ದು ಅದಕ್ಕೆ ಕಾರಣ ಹೆಚ್ಚು ಮರಗಳು ಎಂದು ಕಂಡುಕೊಂಡರು. ಸುಂದ್ರಮ್ ರವರು 2021–22ನೇ ಸಾಲಿನಲ್ಲಿ ಒಂದು ಲಕ್ಷ 25 ಸಾವಿರಕ್ಕೂ ಹೆಚ್ಚು ಮರಗಳನ್ನು ಬೆಳೆಸಿದ್ದಾರೆ. ವಾಯು ಗುಣಮಟ್ಟ ಸೂಚ್ಯಂಕ ಸುದ್ದಿಯನ್ನು ಓದಿದಾಗಿಂದಲೂ ಅವರ ಕೆಲಸ ಮತ್ತು ಅದರ ವಿಸ್ತಾರ ಹೆಚ್ಚುತ್ತಲೇ ಇದೆ.

ಪುಂಗವ PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JUNE 2023 Permitted to post on 28-06-2023

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-07-2023



# ಮತಾಂತರ ರಾಷ್ಟ್ರದ ಬೃಹತ್ ಪಿಡುಗು

**ಬೆಂಗಳೂರು:** ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬರಿಗೂ ಧಾರ್ಮಿಕ ಹಕ್ಕನ್ನು ನೀಡಿರುವಾಗ ಬಲವಂತದ ಮತಾಂತರದ ಪ್ರಕ್ರಿಯೆ ರಾಷ್ಟ್ರದ ಸಂವಿಧಾನಕ್ಕೆ ವಿರೋಧವಾದದ್ದು. ದೇಶಕ್ಕೆ ಅಂಟಿರುವ ರೋಗವಾದ ಮತಾಂತರದ ಪಿಡುಗನ್ನು ಗುಣಪಡಿಸಬೇಕೇ ಹೊರತು ಅದರ ಆಧಾರದಲ್ಲೇ ರಾಜ್ಯದಲ್ಲಿ ಅಶಾಂತಿಯನ್ನು ಉಂಟು ಮಾಡುವುದು ಸರಿಯಲ್ಲ ಎಂದು ಹಿಂದೂ ಮುಖಂಡ ಪ್ರಕಾಶ್ ರಾಜು ಹೇಳಿದರು.

ವಿಶ್ವ ಹಿಂದೂ ಪರಿಷದ್ – ಬಜರಂಗದಳದ ವತಿಯಿಂದ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆದ ಮತಾಂತರ ನಿಷೇಧ ಕಾಯಿದೆ ಹಿಂಪಡೆದ ರಾಜ್ಯ ಸರ್ಕಾರದ ನಿರ್ಧಾರದ ವಿರುದ್ಧದ ಬೃಹತ್ ಪ್ರತಿಭಟನಾ ಸಭೆಯಲ್ಲಿ ಅವರು ಮಾತನಾಡಿದರು.

ಸರ್ಕಾರ ರಚನೆಯಾಗಿ ತಿಂಗಳಾಗುವ ಮುನ್ನ ಮತಾಂತರ ನಿಷೇಧ ಕಾಯ್ದೆಯನ್ನು ಹಿಂಪಡೆದ ತರಾತುರಿ ಕಾಂಗ್ರೆಸ್ ಪಕ್ಷದ ಒಳ ಒಪ್ಪಂದವನ್ನು ಸಾಕ್ಷೀಕರಿಸುತ್ತದೆ. ಧರ್ಮ ಒಡೆಯುವ ಕೆಲಸವನ್ನು ಕರಗತ ಮಾಡಿಕೊಂಡಿರುವ ಕಾಂಗ್ರೆಸ್ ಈಗ ಮನೆಯೊಡೆಯುವ ಕೆಲಸಕ್ಕೆ ಕೈ ಹಾಕಿದೆ. ಸೋನಿಯಾ ಗಾಂಧಿಯವರ ದಲ್ಲಾಳಿಗಳಂತೆ ವರ್ತಿಸುವ ಕರ್ನಾಟಕದ ಕಾಂಗ್ರೆಸ್ ನಾಯಕರು ತನ್ನ ಹೈಕಮಾಂಡ್ ಅನ್ನು ಮೆಚ್ಚಿಸಿ ಅಧಿಕಾರ ಪಡೆದುಕೊಳ್ಳುವ ದುರಾಸೆಯಿಂದ ಧರ್ಮ ದ್ರೋಹದ ಕಾರ್ಯವೆಸಗುತ್ತಿದೆ ಎಂದರು.

ಮುಕ್ಕೋಟಿ ದೇವರನ್ನು, ಸಕಲ ಚರಾಚರಗಳನ್ನು ಪೂಜಿಸುವ ನಮ್ಮ ನಾಡಿನಲ್ಲಿ ಕೆಲವರು ಅಲ್ಲಾ ಹಾಗೂ ಯೇಸುವನ್ನು ಪೂಜಿಸುವುದು ಏನೂ ತೊಂದರೆಯಾಗುವುದಿಲ್ಲ, ಅದಕ್ಕೆ ನಮ್ಮ ವಿರೋಧವೂ ಇಲ್ಲ. ಆದರೆ ಆಮಿಷಗಳನ್ನು ಒಡ್ಡಿ, ಹೆದರಿಸಿ, ಮರುಳು ಮಾಡಿ ಮಾಡುವ ಬಲವಂತದ ಮತಾಂತರವನ್ನು ಖಂಡಿಸುತ್ತೇವೆ. ರಾಷ್ಟ್ರದಲ್ಲಿ ಬಲವಂತದ ಮತಾಂತರಗಳಿಂದ ಆಗುತ್ತಿರುವ ಅನ್ಯಾಯಗಳನ್ನು ಕಣ್ಣಾರೆ ಕಂಡರೂ ಇಂತಹ ನಿರ್ಧಾರಗಳನ್ನು ತೆಗೆದುಕೊಳ್ಳುವ ಕಾಂಗ್ರೆಸ್ ಸರ್ಕಾರ ಅಧಿಕಾರ ಶಾಶ್ವತ ಅಲ್ಲ, ಒಳ್ಳೆಯ ಆಡಳಿತ ಶಾಶ್ವತ ಎನ್ನುವುದನ್ನು ಮನಗಂಡು ಓಲೈಕೆ ರಾಜಕಾರಣವನ್ನು ಬಿಡಬೇಕಾಗಿದೆ ಎಂದು ನುಡಿದರು.

ಹಿಂದೂ ಸಮಾಜ ಸವಾಲುಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಎಲ್ಲಾ ಮಠಗಳ ಪೂಜ್ಯ ಮಠಾಧಿಪತಿಗಳು ಮಠದಿಂದ ಹೊರಬಂದು ಸಮಾಜದ ರಕ್ಷಣೆಗಾಗಿ ಧ್ವನಿ ಎತ್ತಬೇಕಾಗಿದೆ. ನಮ್ಮ ಜಾತಿಯವನಿಗೆ ಪಕ್ಷ ಮತ್ತು ಸರ್ಕಾರಗಳಲ್ಲಿ ಪ್ರಾತಿನಿಧ್ಯ ಸಿಗಬೇಕು ಎಂದು ಪತ್ರಿಕಾ ಪ್ರಕಟಣೆ ನೀಡುವ ಮಠಾಧಿಪತಿಗಳು ಬಲವಂತದ ಮತಾಂತರದ ವಿರುದ್ಧ ಮಾತಾಡಬೇಕಿದೆ. ಹಿಂದೂ ಸಮಾಜ ಮೃತ್ಯುಂಜಯ ಸಮಾಜ ಎನ್ನುವುದನ್ನು ಸಾಬೀತುಪಡಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.



ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಬಜರಂಗದಳದ ವಿಭಾಗ ಸಂಯೋಜಕ ಗೋವರ್ಧನ್ ರಾಜ್ಯದಲ್ಲಿ ಜಿಹಾದಿ ಮಾನಸಿಕತೆಯ ಸರ್ಕಾರ ಆಡಳಿತ ನಡೆಸುತ್ತಿದೆ. 1947ರಲ್ಲಿ ದೇಶ ವಿಭಜನೆಗೊಂಡಾಗ ಪಾಕಿಸ್ತಾನದ ಜನಕ ಮೊಹಮ್ಮದ್ ಅಲಿ ಜಿನ್ನಾ ತೆಗೆದುಕೊಂಡ ಹಿಂದೂ ವಿರೋಧಿ ನಿಲುವುಗಳನ್ನೇ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ತೆಗೆದುಕೊಳ್ಳುತ್ತಿದೆ ಎಂದು ಹೇಳಿದರು.

ರಾಷ್ಟ್ರಾದ್ಯಂತ ಬಲವಂತದ ಮತಾಂತರದ ಸಂಖ್ಯೆ ಹೆಚ್ಚಾಗುತ್ತಿದೆ. ಹಿಂದೂ ಹೆಣ್ಣು ಮಕ್ಕಳು ಲವ್ ಜಿಹಾದ್‌ಗೆ ಬಲಿಯಾದ ಅಸಂಖ್ಯಾತ ಸುದ್ದಿಗಳನ್ನು ಮಾಧ್ಯಮಗಳೇ ವರದಿ ಮಾಡಿವೆ. ಕೇರಳದಲ್ಲಿ ಲವ್ ಜಿಹಾದಿಗೆ ಬಲಿಯಾದ ಹಿಂದೂ ಮತ್ತು ಕ್ರಿಶ್ಚಿಯನ್ ಯುವತಿಯರು ಉಗ್ರವಾದಕ್ಕೆ ಸಹಾಕರಿಯಾಗಿ, ಲೈಂಗಿಕ ದಾಸಿಯರಾಗಿ ನರಕ ವೇದನೆ ಅನುಭವಿಸುತ್ತಿರುವ ಸಾಕ್ಷಿಗಳು ದೊರೆತಿವೆ. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಸರ್ಕಾರ ಮತಾಂತರ ನಿಷೇಧ ಕಾಯ್ದೆಯನ್ನು ಬಲಪಡಿಸಬೇಕಿತ್ತೇ ವಿನಃ ಹಿಂತೆಗೆದುಕೊಳ್ಳಬಾರದು. ಕಾಂಗ್ರೆಸ್‌ನ ಈ ನಿಲುವು ರಾಷ್ಟ್ರದ ಇಸ್ಲಾಮೀಕರಣದ ಸಂಚಿನ ಭಾಗವಾಗಿದೆ ಎಂದರು.

ಸ್ವ ಇಚ್ಛೆಯ ಕಾನೂನು ಬದ್ಧ ಮತಾಂತರಕ್ಕೆ ನಮ್ಮ ವಿರೋಧವಿಲ್ಲ. ಆದರೆ ಕ್ರೈಸ್ತ ಮಿಷನರಿಗಳು ಆಮಿಷಗಳನ್ನು ಒಡ್ಡುವ ಮೂಲಕ, ಮುಸಲ್ಮಾನರು ಲವ್ ಜಿಹಾದಿನ ಮೂಲಕ ಮತಾಂತರಕ್ಕೆ ಮುಂದಾಗುತ್ತಿರುವುದನ್ನು ವಿಶ್ವ ಹಿಂದೂ ಪರಿಷತ್– ಬಜರಂಗದಳ ಬರುವಂತಹ ಸಂಘರ್ಷದ ದಿನಗಳಲ್ಲಿ ಯಾವುದೇ ಕೇಸುಗಳಿಗೆ ಅಂಜದೆ ಪ್ರಬಲವಾಗಿ ಖಂಡಿಸುತ್ತದೆ ಎಂದು ನುಡಿದರು.

ವಿಶ್ವ ಹಿಂದೂ ಪರಿಷತ್ – ಬಜರಂಗದಳದ ವತಿಯಿಂದ ಶಿವಮೊಗ್ಗ, ಮಂಗಳೂರು, ದಾವಣಗೆರೆ ಹಾಗೂ ಇನ್ನಿತರ ಕಡೆಗಳಲ್ಲಿ ಪ್ರತಿಭಟನೆಗಳು ನಡೆಯಿತು. •

# ಕಾರ್ಯಾಲಯಗಳು ರಾಷ್ಟ್ರಕಾರ್ಯದ ಮಂದಿರಗಳು: ಜಯಪ್ರಕಾಶ್

**ಬೆಂಗಳೂರು:** ಸಂಘ ಕಾರ್ಯಕ್ಕೊಂದು ಸ್ಥಾಯಿರೂಪ, ಕಾರ್ಯದ ವಿಸ್ತಾರ ಮತ್ತು ಕಾರ್ಯಕರ್ತರ ವಿಕಾಸಕ್ಕಿರುವ ರಾಷ್ಟ್ರ ಕಾರ್ಯದ ಮಂದಿರ ಕಾರ್ಯಾಲಯ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಪ್ರಾಂತ ಕಾರ್ಯವಾಹ ಜಯಪ್ರಕಾಶ್ ಹೇಳಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಯಲಹಂಕ ಭಾಗದ ಸಂಘ ಕಾರ್ಯಾಲಯ 'ಉತ್ಕರ್ಷ' ಇದರ ಉದ್ಘಾಟನೆಯ ಸಭಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಂಘದಲ್ಲಿ ಸ್ವಾರ್ಥವಿಲ್ಲ ಹಾಗಾಗಿ ಸಂಘಟನೆಯಲ್ಲಿ ಬಲವಿದೆ. ಧ್ಯೇಯಕ್ಕಾಗಿ ತಪಸ್ವಿಗಳಂತೆ ಕಾರ್ಯ ನಿರ್ವಹಿಸುವ ಕಾರ್ಯಕರ್ತರಿದ್ದಾರೆ. ಅಂತಹ ಕಾರ್ಯಕರ್ತರಿಗೆ ಕಾರ್ಯಾಲಯ ಸಂಘ ಕಾರ್ಯದ ಧ್ಯೇಯದ ದರ್ಶನವನ್ನು ಮಾಡಿಸುತ್ತದೆ. ಕಾರ್ಯಾಲಯಕ್ಕೆ ಬಂದಂತಹ ಪ್ರತಿ ವ್ಯಕ್ತಿಗೂ ಸ್ವಯಂಸ್ಫೂರ್ತಿಯಿಂದ ರಾಷ್ಟ್ರಕಾರ್ಯದ ಸಂಕಲ್ಪ ಕೈಗೊಳ್ಳಲು ಪ್ರೇರಣೆ ತುಂಬುವ ಶ್ರದ್ಧಾಕೇಂದ್ರವಾಗಿದೆ ಎಂದು ಅಭಿಪ್ರಾಯಪಟ್ಟರು.

ಆಧುನಿಕತೆ ಸಭ್ಯತೆಯ ಭಾಗ. ಆದರೆ ಪಾಶ್ಚಾತ್ಯೀಕರಣವೇ ಆಧುನಿಕತೆಯಲ್ಲ. ರಾಷ್ಟ್ರೀಯತೆ ಮತ್ತು ಸಮಾಜ ಪರಿವರ್ತನೆಯ ಕುರಿತಾದ ಅನೇಕ ಮಹನೀಯರ ಉಕ್ತಿಗಳು ಭಾಷಣಕ್ಕೆ ಸೀಮಿತವಾಗದೆ




ನಮ್ಮ ಆಚರಣೆಯಾಗಬೇಕು. ಸಂಘದ ಕಾರ್ಯಾಲಯದ ಸಂಪರ್ಕಕ್ಕೆ ಬಂದಂತಹ ಪ್ರತಿ ವ್ಯಕ್ತಿಗೂ ಈ ನಿಟ್ಟಿನಲ್ಲಿ ಪ್ರೇರಣೆಯನ್ನೊದಗಿಸುವ ಕೇಂದ್ರವಾಗಬೇಕು ಎಂದರು.

ವೇದಿಕೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಮಧ್ಯ ಕ್ಷೇತ್ರೀಯ ಕ್ಷೇತ್ರ ಪ್ರಚಾರಕ್ ಸುಧೀರ್, ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಿಣಿ ಸದಸ್ಯ ಗಣಪತಿ ಹೆಗಡೆ, ಹುಣಸಮಾರನಹಳ್ಳಿ ನಗರ ಸಂಘಚಾಲಕ ಕರ್ನಲ್ ರಾಮದಾಸ ಉಪಸ್ಥಿತರಿದ್ದರು. ಸಭಾ ಕಾರ್ಯಕ್ರಮಕ್ಕೂ ಮೊದಲು ಧಾರ್ಮಿಕ ಕಾರ್ಯಕ್ರಮ ನಡೆಯಿತು.•

# ಮಣಿಪುರದಲ್ಲಿ ಶಾಂತಿ ಸೌಹಾರ್ದತೆ ಸ್ಥಾಪಿಸಲು ಆರ್‌ಎಸ್‌ಎಸ್ ಮನವಿ



ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಖಂಡಿಸಿದೆ. ರಾಜ್ಯದಲ್ಲಿ ಶಾಂತಿ ಮರುಸ್ಥಾಪಿಸಲು ಕ್ರಮ ಕೈಗೊಳ್ಳಬೇಕು ಎಂದು ಸರ್ಕಾರ, ಸ್ಥಳೀಯ ಆಡಳಿತ, ಪೊಲೀಸರು ಮತ್ತು ಭದ್ರತಾ ಪಡೆಗಳು ಸೇರಿ ಕೇಂದ್ರೀಯ ಸಂಸ್ಥೆಗಳಲ್ಲಿ ಮನವಿ ಮಾಡಿದೆ.

ಶಾಂತಿ ಮತ್ತು ಸೌಹಾರ್ದಕ್ಕೆ ಕ್ರಮ ಕೈಗೊಳ್ಳುವ ಜೊತೆಗೆ ಹಿಂಸಾಚಾರದಿಂದ ನಲುಗಿ ಸ್ಥಳಾಂತರಗೊಂಡಿರುವ ಜನರಿಗೆ ಅಗತ್ಯ ಪರಿಹಾರ ಸಾಮಗ್ರಿಗಳನ್ನು ಒದಗಿಸಬೇಕು ಎಂದು ಆರ್‌ಎಸ್‌ಎಸ್ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

'ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಹಿಂಸಾಚಾರ ಮತ್ತು ದ್ವೇಷಕ್ಕೆ ಜಾಗ ಇಲ್ಲ. ಉಭಯ ಸಮುದಾಯಗಳು ಮಾತುಕತೆ ಮೂಲಕ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಬೇಕು. ಯಾವುದೇ ಸಮಸ್ಯೆಗೂ ಮಾತುಕತೆ ಮತ್ತು ಸಹೋದರತ್ವದಲ್ಲಿ ಪರಿಹಾರವಿದೆ ಎಂದು ಹೇಳಿದ್ದಾರೆ.

ಹಿಂಸೆ ಮತ್ತು ಗಲಭೆ ನಿಯಂತ್ರಣಕ್ಕೆ ಪ್ರತಿಯೊಬ್ಬ ಪ್ರಜೆ, ರಾಜಕೀಯ ಗುಂಪುಗಳೂ ಸಾಧ್ಯವಾದ ಕ್ರಮವಹಿಸಬೇಕು ಎಂದು ತಿಳಿಸಿದ್ದಾರೆ. •

# ಪಾಕ್ ಇನ್ಫ್ಲುಯೆನ್ಸರ್ ಹಿಂದು ಧರ್ಮಕ್ಕೆ ಸೇರ್ಪಡೆ



ಸನಾತನ ಧರ್ಮ ಜಗತ್ತಿನ ಅತ್ಯಂತ ಪ್ರಾಚೀನ ಧರ್ಮವಾಗಿದ್ದು, ಇದರ ಮೌಲ್ಯವು ಜಗತ್ತಿನಾದ್ಯಂತ ಪಸರಿಸಿದೆ. ಪಾಕಿಸ್ಥಾನದ ಬೇಹುಗಾರಿಕಾ ಸಂಸ್ಥೆ ಐಎಸ್ ಐನ ಕಿರುಕುಳಕ್ಕೆ ಒಳಗಾಗಿದ್ದಾಗ ಭಗವಾನ್ ಕೃಷ್ಣ ಮತ್ತು ಭಗವದ್ಗೀತೆಯು ಖಿನ್ನತೆ ಹೋಗಲಾಡಿಸಲು ಸಹಾಯ ಮಾಡಿತು ಎಂದು ಪಾಕಿಸ್ತಾನ ಮೂಲದ ಸಾಮಾಜಿಕ ಮಾಧ್ಯಮ ಇನ್ಫ್ಲುಯೆನ್ಸರ್ ಶಯಾನ್ ಅಲಿ ಹಿಂದೂ ಧರ್ಮವನ್ನು ಸ್ವೀಕರಿಸಿದ್ದಾರೆ.



**ಒರಿಸ್ಸಾ:** ಪುರಿ ಜಗನ್ನಾಥ ಸ್ವಾಮಿಯ ರಥಾಯಾತ್ರೆಯಲ್ಲಿ ಸಾವಿರಾರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ವಯಂಸೇವಕರು ಸೇವಾಕಾರ್ಯದಲ್ಲಿ ನಿರತರಾಗಿದ್ದರು. ಗಾಯಗೊಂಡವರಿಗೆ ಹಾಗೂ ವೃದ್ಧರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ನೆರವಾದರು.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.